# ನೀವು ಕೇಳಿದಿರಿ?

ಬೂಕನಕೆರೆ ವಿಜೇಂದ್ರ, ಮೈಸೂರು
'ಯುವ ಕವಿ'ಗಳೇಕೆ ಹುಡುಗಿಯರ ಬಗ್ಗೆಯೇ ಕವನ ಬರೆಯುತ್ತಾರೆ?



ಯಾವುದು ಕೈಗೆಟುಕದೋ ಅದರ ಬಗ್ಗೆ ಕಲ್ಪನೆ, ಕವನ ಹೆಚ್ಚು.

ವಿ. ಹೇಮಂತಕುಮಾರ್, ಬೆಂಗಳೂರು
ಮನೆಯಲ್ಲಿ ಒಳ್ಳೆಯ ಊಟವಿದ್ದರೂ ಕೆಲವರು ಹೋಟೆಲ್ ಊಟವನ್ನೇ ಇಷ್ಟ ಪಡುವುದೇಕೆ?
ಮನೆಯಲ್ಲಿ ಎಂದೂ ದೊರೆಯದ 'ಆರ್ಡರ್' ಮಾಡುವ ಅವಕಾಶ ಸಿಗುತ್ತದಲ್ಲ!

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಅತಿ ಕುಡಿದ ಗಂಡನ ಮತ್ತಿಳಿಸುವವಳು ಹೆಂಡತಿ. ಆದರೆ ಅವಳ ಹೆಸರಲ್ಲೇಕಿದೆ ಹೆಂಡ+ಅತಿ?
ಅತಿ ಎಂದರೆ ಮೀರುವಿಕೆ ಎಂಬರ್ಥವಿದೆ. ಹೆಂಡದ ನಶೆ ಮೀರಿದವಳೇ ಹೆಂಡತಿ.

ಬಿ.ಆರ್. ಉಷಾ, ಬೆಂಗಳೂರು
ಗಣೇಶನ ಹೊಟ್ಟೆಯ ಮೇಲಿರುವ ಹಾವು ಇಲಿಯನ್ನು ತಿನ್ನುವುದಿಲ್ಲವಾ?



ತಿಂದರೆ ನವಿಲಿಗೆ ಹಿಡ್ಕೊಡ್ತೀನಿ ಹುಷಾರ್ ಅಂದಿದ್ದಾನಂತೆ ಗಣೇಶ.

ಮಧುಮತಿ ಅಭಿಷೇಕ್, ಚಿತ್ರದುರ್ಗ
ಪ್ರೀತಿ ಮತ್ತು ತ್ಯಾಗದ ನಡುವೆ ಇರುವ ಸಂಬಂಧವೇನು?
ಒಲವಿನ ಪಥವೇ; ಲಗ್ನದತ್ತ ನಡೆದರೆ ಪ್ರೀತಿ; ಭಗ್ನದತ್ತ ನಡೆದರೆ ತ್ಯಾಗ.

ಜಗದೀಶ ಬಿ. ಹೊಸೂರು, ಮೈಸೂರು
ಬಿಚ್ಚಿಡುತ್ತೇನೆ ಎಂದು ಹೇಳುವ ರಾಜಕಾರಣಿಗಳು ನಿಜವಾಗಿಯೂ ಬಿಚ್ಚಿಟ್ಟರೆ ಏನಾಗುತ್ತದೆ?
ಖಾಲಿ ಚೀಲ ಕಾಣುತ್ತದೆ.

ಸೂರ್ಯಪ್ರಕಾಶ, ಚೆನ್ನಾಗನಹಳ್ಳಿ
'ಏನಪ್ಪ ಅಂದರೆ' ಅಂತ ಎಲ್ಲಾ ವರದಿಯನ್ನ ಗಂಡಸಿಗೆ ಒಪ್ಪಿಸುವುದೇಕೆ? 'ಏನಮ್ಮ ಅಂದರೆ' ಅಂತ ಯಾಕೆ ಒಪ್ಪಿಸಲ್ಲ?
ಹೇಳಿದ್ದನ್ನೆಲ್ಲ ಕೇಳಿಸಿಕೊಳ್ಳುವುದು ಗಂಡೇ ಎನ್ನಲು ಜನಮೇಜಯನ ಸಾಕ್ಷಿ ಇರುವುದರಿಂದ.

ಆರ್. ನಾಗರಾಜ್, ಗೊರೂರು
ದೇವರು ಕೂಡ ಪ್ರತಿ ವಾರ ನೀವು ಕೇಳಿದಿರಿ ಕಾಲಂ ಓದಿ ನಿಟ್ಟುಸಿರು ಬಿಡ್ತಾನಂತೆ?
ಸಹಜವೇ. ಇಲ್ಲಿರುವ ವೈವಿಧ್ಯ ಸ್ವರ್ಗದಲ್ಲೂ ಇಲ್ಲವಂತೆ.

ರತ್ನಾ ಕೊರವರ
ಇರುವುದು ಒಂದೇ ಪ್ರಪಂಚವಾದರೂ ಕೆಲವರು 'ನಮ್ಮದೇ ಬೇರೆ ಪ್ರಪಂಚವಿದೆ' ಎನ್ನುವುದೇಕೆ?
ಪ್ರಪಂಚವೃಕ್ಷದಲ್ಲಿ ಅವರದು 'ಬೇರೆ'; ಮಿಕ್ಕವರದು ಕಾಂಡ, ರೆಂಬೆ, ಪತ್ರ, ಫಲ, ಹೂ ಇತ್ಯಾದಿಯಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮಾನವನಿಗೂ, ದೇವಮಾನವನಿಗೂ ವ್ಯತ್ಯಾಸವೇನು?
ಮಾನವ ಯತ್ನಿಸಿದರೆ ಮಾನವನಾಗಬಹುದು; ದೇವಮಾನವ ದೇವನೂ ಆಗಲಾರ, ಮಾನವನೂ ಆಗಲಾರ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ನಮ್ಮ ಅನುಭವವನ್ನು ಹೆಚ್ಚಿಸುವ ಸಾಧನೆ ಯಾವುದು?
ಶುದ್ಧ ಅಯೋಗ್ಯನಿಗೆ ಶೂರಿಟಿ ಹಾಕುವುದು.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ರಾಜಕೀಯಕ್ಕಿಳಿಯುವ ಯುವಕರಿಗೆ ಏನು ಸಲಹೆ ಕೊಡುತ್ತೀರಾ?
**Some** ವಿಧಾನ ಬಳಸಿ ಆಳುವ ಬದಲು ಸಂವಿಧಾನ ಅರಿತು ಬಾಳಿ ಎಂದು.

ಜೆ. ಪ್ರದೀಪಕುಮಾರ, ಹೂವಿನಹಡಗಲಿ
ಮನುಷ್ಯರು ಕೆಲವು ತಪ್ಪುಗಳನ್ನು ಗೊತ್ತಿದ್ದೂ ಮಾಡುವುದಕ್ಕೆ ಕಾರಣವೇನು?
ಅನಿವಾರ್ಯತೆ; ಕೆಡುಕನೆಂದು ಗೊತ್ತಿದ್ದರೂ ಮತ ಹಾಕಲೇಬೇಕಲ್ಲ!

## ವಾರದ ಪ್ರಶ್ನೆ

ಬಾ.ರಂ. ಸುರೇಶ್, ಶಿವಮೊಗ್ಗ
ದೇವರಲ್ಲಿ ನಾವು ಕೇಳಿಕೊಂಡ ವರಗಳೆಲ್ಲ ಸ್ಯಾಂಕ್ಷನ್ ಆದರೆ ನಮ್ಮ ಪರಿಸ್ಥಿತಿ ಏನಾಗಬಹುದು ಶಿವಾ?
ನಮ್ಮದು ಅಂತಿರಲಿ, ದೇವನದು ಅಭಿಷೇಕ, ನೈವೇದ್ಯವೂ ಇಲ್ಲದೆ ಸೊರಗುವ ಸ್ಥಿತಿ ಆಗುತ್ತದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು
ನಾರಿ ಮುನಿದರೆ ಮಾರಿ. ಗಂಡು ಮುನಿದರೆ?
ಕೊಠಡಿಯಿಂದ ಹೊರಕ್ಕೆ ದಾರಿ!

ಮಂಡಿ ಕುಮಾರ್, ಬೆಂಗಳೂರು
ಈಗಲೋ ಆಗಲೋ ಎನ್ನುವುದು ಸಾವಿಗೆ ಮಾತ್ರವೆ?
ಕೆಲವು ವಾಲುಕಟ್ಟಡಗಳ ಬಗ್ಗೆಯೂ ಹೇಳಬಹುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದೇವರಿಗೆ ಹೂ ಕೊಡುವುದಕ್ಕೂ, ಪ್ರೇಯಸಿಗೆ ಹೂ ಕೊಡುವುದಕ್ಕೂ ಏನು ವ್ಯತ್ಯಾಸ?



ಅಲ್ಲಿ ವರ ಸಿಗುವ ಸಾಧ್ಯತೆ ಇರುತ್ತದೆ; ಇಲ್ಲಿ ವಧು ಸಿಗುವ ಸಾಧ್ಯತೆ ಇರುತ್ತದೆ.

ಬಿ.ಸುಜಾತ, ತಿ.ನರಸೀಪುರ
ಮನೆ ತಾತನದ್ದೇ ಆಗಿದ್ದರೂ, ಎಲ್ಲ ಚಿಕ್ಕ ಮಕ್ಕಳೂ ಅಜ್ಜಿಮನೆ ಎನ್ನುವುದೇಕೆ?
ಹೆಸರಿಗೆ ತಾತನದ್ದಾದರೂ ಆಡಳಿತ ಅಜ್ಜಿಯದೇ ಎಂದು ಚಿಳ್ಳೆಗಳಿಗೂ ಗೊತ್ತಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಪ್ಲೇ ಸ್ಟೋರ್‌ಗೂ, ಜನರಲ್ ಸ್ಟೋರ್‌ಗೂ ಇರುವ ವ್ಯತ್ಯಾಸವೇನು?
ಜನರಲ್ ಸ್ಟೋರಲ್ಲಿ ರೇಟ್ ಮುಖ್ಯ; ಪ್ಲೇ ಸ್ಟೋರಲ್ಲಿ ರೇಟಿಂಗ್ ಮುಖ್ಯ.

■ ರಾಮ್